-9-

ಮೂಲ ದಾವಾ ಸಂಖ್ಯೆ. 45/2016 ಡಿ ಡಬ್ಲ್ಯೂ 1

(ದಿನಾಂಕ 18-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಂ ಜೆ ವಕೀಲರಿಂದಃ-

ಈ ಹಿಂದಿನ ದಿನಾಂಕದ ಪಾಟೀ ಸವಾಲಿನಲ್ಲಿ ನಾನು ನ್ಯಾಯಾಲಯಕ್ಕೆ ಪಾಲುವಿಭಾಗ ಪತ್ರವನ್ನು ಹಾಜರುಪಡಿಸುತ್ತೇನಂತಾ ಹೇಳಿದ್ದು ನನಗೆ ಅದು ಲಭ್ಯವಾಗಿಲ್ಲ ಆದ್ದರಿಂದ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಸದರಿ ಪಾಲುವಿಭಾಗ ಪತ್ರ ನಮ್ಮ ಮನೆಯಲ್ಲಿರುವುದಿಲ್ಲ ಅದನ್ನು ತಾಲ್ಲೂಕು ಕಚೇರಿಯಲ್ಲಿ ಕೇಳಬೇಕಾಗುತ್ತದೆ. ಆ ರೀತಿ ಕಾನೂನುಬದ್ಧವಾದ ಯಾವುದೇ ಪಾಲುಪಟ್ಟಿ ಇಲ್ಲ ಅದು ಕಾನೂನುಬಾಹಿರ ಪಾಲುಪಟ್ಟಿಯಾಗಿರುವುದರಿಂದ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. 1992-93 ರಿಂದ ದಾವಾಸ್ತಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಚನ್ನಬಸಮ್ಮ ಇವರಿಂದ ನೇರವಾಗಿ ಪ್ರಭಾಕರ ಇವರ ಹೆಸರಿಗೆ ಆಗಿರುತ್ತದೆಂದರೆ ಸರಿ. ಅದು ಯಾವ ದಾಖಲೆಯಾಧಾರದ ಮೇಲೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ನಿಮ್ಮ ಸಾಕ್ಷ್ಯ ಪ್ರಮಾಪತ್ರದಲ್ಲಿ ಚನ್ನಬಸಮ್ಮ ಇವರು ಎಂ ಆರ್ ನಂ.36/1992-93 ರಂತೆ ಹಕ್ಕು ಬದಲಾವಣೆ ಮಾಡಿಸಿರುತ್ತಾಳಂತಾ ಬರೆದಿದ್ದು ಆ ಬಗ್ಗೆ ಯಾರು ಅರ್ಜಿಯನ್ನು ನೀಡಿರುತ್ತಾರೆಂದರೆ ಸಾಕ್ಷಿಯು ನನ್ನ ತಂದೆ ಅಥವಾ ಚಿಕ್ಕಪ್ಪ ನೀಡಿರಬಹುದು ಎನ್ನುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಪತ್ರದಲ್ಲಿ ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

-10-

ಮೂಲ ದಾವಾ ಸಂಖ್ಯೆ. 45/2016 ಡಿ ಡಬ್ಲ್ಯೂ 1

ಸನ್ 2013 ರಲ್ಲಿ ಸದರಿ ಆಸ್ತಿಯ ಖಾತೆ ಬದಲಾವಣೆ ಪ್ರಭಾಕರ ಇವರಿಂದ ನೇರವಾಗಿ ನನ್ನ ಹೆಸರಿಗೆ ಆಗಿರುತ್ತದೆಂದರೆ ಸರಿ. ಸದರಿ ಹಕ್ಕುಬದಲಾವಣೆ ಪಾಲುವಿಭಾಗದ ಆಧಾರದ ಮೇಲೆ ಆಗಿರುತ್ತದೆ. ಸದರಿ ಪಾಲುವಿಭಾಗ ಸನ್ 2012-13 ನೇ ಸಾಲಿನಲ್ಲಿ ಆಗಿರುತ್ತದೆ ದಿನಾಂಕ ನನಗೆ ಗೊತ್ತಿಲ್ಲ. ಸಾಕ್ಷಿಗೆ ಎಂ ಆರ್ ನಂ.39 ರ 9 ಪುಟಗಳ ಮ್ಯುಟೇಶನ್ ಫೈಲಿನ ದೃಢೀಕೃತ ನಕಲನ್ನು ತೋರಿಸಿ ಇದು ನಿಮ್ಮ ಹೆಸರಿಗೆ ಖಾತೆ ಬದಲಾವಣೆ ಕುರಿತು ಆದ ಮ್ಯುಟೇಶನ್ ಅಂತಾ ಕೇಳಲಾಗಿ ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಹೌದು ಅಂತಾ ಉತ್ತರಿಸಿದ್ದು ಸದರಿ ದಾಖಲೆಯನ್ನು ನಿಪಿ-21 ಎಂದು ಗುರುತಿಸಲಾಯಿತು. ನಾನು ಸದರಿ ಖಾತೆ ಬದಲಾವಣೆಯನ್ನು ಸಂಪೂರ್ಣ ಸುಳ್ಳು ಮಾಹಿತಿ ನೀಡಿ ಮಾಡಿಸಿಕೊಂಡಿರುತ್ತೇನೆಂದರೆ ಸುಳ್ಳು.

ಸದರಿ ದಾಖಲೆಯಲ್ಲಿ ದಿಃ16-09-2013 ರ ಪಾಲುವಿಭಾಗದ ಬಗ್ಗೆ ಉಲ್ಲೇಖವಿದ್ದು ಸದರಿ ಪಾಲುವಿಭಾಗ ಪತ್ರವನ್ನು ಕಂದಾಯ ಇಲಾಖೆಗೆ ಹಾಜರುಪಡಿಸದೇ ಮ್ಯುಟೇಶನ್ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಿಃ16-09-2013 ರ ಪಾಲುವಿಭಾಗ ಪತ್ರ ನನ್ನ ಬಳಿ ಇದೆ. ಸದರಿ ಪಾಲುವಿಭಾಗ ಪತ್ರದಲ್ಲಿ ನನಗೆ ಮಾತ್ರ ಜಮೀನು ಬಂದಿದೆ ನನ್ನ ಸಹೋದರ ಸಹೋದರಿಯರಿಗೆ ಸದರಿ ಪಾಲುವಿಭಾಗ ಪತ್ರದಲ್ಲಿ ಯಾವುದೇ ಆಸ್ತಿ ಬಂದಿಲ್ಲ. ದಿಃ16-09-2013 ರ ಪಾಲುವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಪೌತಿ ಖಾತಾ ಬದಲಾವಣೆಯನ್ನು ಹೊರತುಪಡಿಸಿ ಉಳಿದ ಯಾವುದೇ ಆಸ್ತಿಗಳ ಖಾತೆ ಬದಲಾವಣೆ ಕುರಿತು ಇ ಸಿ ಹಾಜರುಪಡಿಸಬೇಕಾಗುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ ಎಂ ಆರ್ ನಂ.39 ರ ಕುರಿತು ನೀಡಿದ ಅರ್ಜಿಯಲ್ಲಿ ಪ್ರಭಾಕರ ಬಿನ್ ವಿರೂಪಾಕ್ಷಪ್ಪ ಇವರು ಪೌತಿಯಾಗಿರುತ್ತಾರೆಂದು ಅರ್ಜಿ ನೀಡಿದ್ದು ಇದೆ ಎಂದರೆ ಸಾಕ್ಷಿಯು ಅರ್ಜಿ ನೀಡಿದ್ದು ನಿಜ ಇದೆ ಆದರೆ ಅವರು ಜೀವಂತ ಇರುತ್ತಾರೆ. ಪ್ರಭಾಕರ ಇವರು ಪೌತಿಯಾಗಿರುತ್ತಾರಂತಾ ಸುಳ್ಳು ಹೇಳಿ ನಿಮ್ಮ ಹೆಸರಿಗೆ ಮ್ಯುಟೇಶನ್ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಇ ಸಿ ದಾಖಲೆಯನ್ನು ಕಂದಾಯ ಅಧಿಕಾರಿಗಳ ಬಳಿ ಹಾಜರುಪಡಿಸಿದ್ದಲ್ಲಿ ವಾದಿಯ ಹೆಸರು ಬರುತ್ತದಂತಾ ಸದರಿ ದಾಖಲೆಯನ್ನು ಹಾಜರುಪಡಿಸದೇ ಸುಳ್ಳು ಮ್ಯುಟೇಶನ್ ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ವಾದಿಗೆ ಗೊತ್ತಿಲ್ಲದ ಹಾಗೆ ನನ್ನ ಹೆಸರಿಗೆ ಮ್ಯುಟೇಶನ್ ಮಾಡಿಸಿಕೊಂಡಿರುತ್ತೇನೆಂದರೆ ಸುಳ್ಳು.



ಸನ್ 2019 ರಲ್ಲಿ ದಾವಾ ಜಮೀನಿಗೆ ಸಂಬಂಧಿಸಿದಂತೆ ನಾವು ಇನ್ನೊಂದು ಮ್ಯುಟೇಶನ್ ಮಾಡಿಸಿಕೊಂಡಿರುತ್ತೇವೆಂದರೆ ಸರಿ. ವಿರೂಪಾಕ್ಷಪ್ಪ ಇವರ 5 ಜನ ಮಕ್ಕಳು ದಾವಾಸ್ತಿಯನ್ನು ನಮ್ಮ ತಂದೆಯವರು ಮಾರಾಟ ಮಾಡಿದ್ದಾರೆ ಅದನ್ನು ಬಿಟ್ಟು ಮ್ಯುಟೇಶನ್ ಮಾಡಿಕೊಳ್ಳೋಣ ಅಂತಾ ನನಗೆ ಹೇಳಿದ್ದರು ಅದನ್ನು ನಾನು ಒಪ್ಪದೇ ದಾವಾಸ್ತಿಯನ್ನು ನನ್ನ ಹೆಸರಿಗೆ ಮ್ಯುಟೇಶನ್ ಮಾಡಿಕೊಂಡು ಉಳಿದ ಆಸ್ತಿಯನ್ನು ಕುಟುಂಬದವರ ಹೆಸರಿಗೆ ಮ್ಯುಟೇಶನ್ ಮಾಡಿಸಿರುತ್ತೇನೆಂದರೆ ಸುಳ್ಳು. ದಾವಾ ಸರ್ವೆ ನಂ.488/ಇ ದಲ್ಲಿ ನಮ್ಮ ತಾಯಿಯವರಿಗೆ 3.14 ಎಕರೆ ಜಮೀನು ಬಂದಿದೆ. ನಮ್ಮ ಕುಟುಂಬಕ್ಕೆ ಈಗಾಗಲೇ 3.14 ಎಕರೆ ಜಮೀನು ಬಂದಿದ್ದು ಪುನಃ ಇದೇ ಸರ್ವೆ ನಂಬರಿನಲ್ಲಿ 4 ಎಕರೆ ಜಮೀನು ನಮ್ಮ ಕುಟುಂಬಕ್ಕೆ ಬರುವುದಿಲ್ಲವೆಂದರೆ ಸರಿಯಲ್ಲ.

ಸನ್ 2019 ರಲ್ಲಿ ಮ್ಯುಟೇಶನ್ ಮಾಡಿಸಿಕೊಳ್ಳುವ ಸಮಯದಲ್ಲಿ ನಾವು ಒಂದು ಪಾಲುಪಟ್ಟಿ ಮಾಡಿಸಿಕೊಂಡಿರುತ್ತೇವೆಂದರೆ ಸರಿ. ದಾವಾ ಜಮೀನಿನ ಕುರಿತು ನಮ್ಮ ಕುಟುಂಬದಲ್ಲಿ ನಮ್ಮ ಕುಟುಂಬದಲ್ಲಿ 3 ಪಾಲುವಿಭಾಗ ಪತ್ರಗಳಾಗಿರುತ್ತವೆ ಸದರಿ ದಾಖಲೆಗಳು ನೊಂದಾಯಿತ ದಾಖಲೆಗಳಾಗಿರುತ್ತವೆ. ನಾನು ಸದರಿ ಮೂರು ನೊಂದಾಯಿತ ಪಾಲುವಿಭಾಗಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಆ ರೀತಿ ಯಾವುದೇ ನೊಂದಾಯಿತ ಪಾಲುವಿಭಾಗಪತ್ರಗಳು ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಸರಿಗೆ ಕಂದಾಯ ದಾಖಲೆಗಳನ್ನು ಹೊರತುಪಡಿಸಿ ಬೇರ್ಯಾವುದೇ ದಾಖಲೆಗಳಿಲ್ಲವೆಂದರೆ ಸರಿಯಲ್ಲ.

ಈ ನ್ಯಾಯಾಲಯದಲ್ಲಿ ಆದ ಮಧ್ಯಂತರ ಆದೇಶದ ಮೇಲೆ ನೀವು ಮೇಲ್ಮನವಿ ಏನಾದರೂ ಸಲ್ಲಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಖರೀದಿಸಿದ ದಿನದಿಂದ ವಾದಿಯೇ ಸ್ವಾಧೀನದಲ್ಲಿರುತ್ತಾನೆಂದರೆ ಸುಳ್ಳು. ದಾವಾಸ್ತಿಯನ್ನು ಈಗಾಗಲೇ ವಾದಿಗೆ ನನ್ನ ಅಜ್ಜ ಮಾರಾಟ ಮಾಡಿರುವುದರಿಂದ ದಾವಾಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ